ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂಖ್ಯೆ:ಕರಾಸಾ/ಕೇಕ/ಆಡಳಿತ/ಸೇನಿ/ 42 /2020-21 ದಿನಾಂಕ: 25-06-2020

# ಸುತ್ತೋಲೆ ಸಂಖ್ಯೆ: 1677

ವಿಷಯ: ಗರ್ಭಿಣಿ ಮಹಿಳಾ ಸಿಬ್ಬಂದಿಗಳನ್ನು ಲಘು ಕರ್ತವ್ಯದ ಮೇಲೆ ನಿಯೋಜಿಸುವ ಕುರಿತು.

ಉಲ್ಲೇಖ: 1. ಸುತ್ತೋಲೆ ಸಂಖ್ಯೆ: 1473, ದಿನಾಂಕ:10-10-2012
2. ಸುತ್ತೋಲೆ ಸಂಖ್ಯೆ: 1638, ದಿನಾಂಕ:10-08-2018
3. ಮಂಡಳಿ ಠರಾವು ಸಂಖ್ಯೆ:10153, ದಿನಾಂಕ:27-01-2020
4. ಮಂಡಳಿ ಠರಾವು ಸಂಖ್ಯೆ:10169, ದಿನಾಂಕ:20-05-2020

- - - -

ಕ.ರಾ.ರ.ಸಾ. ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ಅಧಿಕಾರಿ/ಸಿಬ್ಬಂದಿಗಳು (ತರಬೇತಿ ನೌಕರರನ್ನೊಳಗೊಂಡಂತೆ) ಸಲ್ಲಿಸುವ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ 180 ದಿನಗಳ ಹೆರಿಗೆ ರಜೆಯನ್ನು ಮಂಜೂರು ಮಾಡಲು ಉಲ್ಲೇಖಿತ ಸುತ್ತೋಲೆಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಗರ್ಭಿಣಿ ಮಹಿಳಾ ನಿರ್ವಾಹಕಿ/ಚಾಲಕಿ/ಚಾಲಕಿ-ಕಂ-ನಿರ್ವಾಹಕಿ/ತಾಂತ್ರಿಕ ಸಿಬ್ಬಂದಿ/ಮಾರ್ಗ ತನಿಖಾ ಸಿಬ್ಬಂದಿಗಳು ಅವರ ಹುದ್ದೆಯ ಕರ್ತವ್ಯ ನಿರ್ವಹಿಸುವುದು ಮಗುವಿನ ಮತ್ತು ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಸೂಕ್ತವಲ್ಲವೆಂದು ಅಭಿಪ್ರಾಯಿಸಿ, ಸದರಿಯವರನ್ನು ಲಘು ಕರ್ತವ್ಯದ ಮೇಲೆ ನಿಯೋಜಿಸುವ ಕುರಿತು ಪ್ರಸ್ತಾವನೆಯನ್ನು ನಿಗಮದ ನಿರ್ದೇಶಕರ ಮಂಡಳಿಯಲ್ಲಿ ಮಂಡಿಸಲಾಗಿದ್ದು, ನಿಗಮದ ನಿರ್ದೇಶಕರ ಮಂಡಳಿಯು ಠರಾವು ಸಂಖ್ಯೆ: 10153, ದಿನಾಂಕ:27-01-2020 ಮತ್ತು ಠರಾವು ಸಂಖ್ಯೆ:10169, ದಿನಾಂಕ:20-05-2020 ರನ್ವಯ ಈ ಕೆಳಗಿನಂತೆ ಒಪ್ಪಿಗೆ ನೀಡಿರುತ್ತದೆ.

1) ಮಹಿಳಾ ನಿರ್ವಾಹಕಿ/ಚಾಲಕಿ/ಚಾಲಕಿ-ಕಂ-ನಿರ್ವಾಹಕಿ, ತಾಂತ್ರಿಕ ಸಿಬ್ಬಂದಿ ಮತ್ತು ಮಾರ್ಗ ತಪಾಸಣೆ ಕರ್ತವ್ಯ ನಿರ್ವಹಿಸುವ ಮಹಿಳಾ ತನಿಖಾ ಸಿಬ್ಬಂದಿಗಳು ಗರ್ಭಿಣಿ ಆಗಿರುವ ಕುರಿತು ವೈದ್ಯಕೀಯ ಪ್ರಮಾಣಪತ್ರವನ್ನು ಸಲ್ಲಿಸುವ ಪ್ರಕರಣಗಳಲ್ಲಿ 3, 4, 5 ಮತ್ತು 6 ನೇ ತಿಂಗಳ ಅವಧಿಯಲ್ಲಿ ಅವರುಗಳಿಗೆ ಲಘು ಕರ್ತವ್ಯ ನಿರ್ವಹಿಸಲು ಅವಕಾಶ ಕಲ್ಪಿಸಿಕೊಡುವುದು. ಅಂದರೆ, ಅವರನ್ನು ಇತರೆ ಕೆಲಸದ ಮೇಲೆ ನಿಯೋಜಿಸುವುದು.
2) 7ನೇ ತಿಂಗಳ ಆರಂಭದಿಂದಲೇ ಹೆರಿಗೆ ರಜೆಯನ್ನು ಸುತ್ತೋಲೆ ಸಂಖ್ಯೆ: 1638, ದಿನಾಂಕ:10-08-2018 ರನ್ವಯ ೯೦ ದಿನ ಹೆರಿಗೆ ಪೂರ್ವ ಮತ್ತು ೯೦ ದಿನ ಹೆರಿಗೆ ನಂತರದ ರಜೆ ನೀಡುವುದು.
3) ಹೆರಿಗೆ ರಜೆ ಮುಕ್ತಾಯವಾದ ನಂತರ 3 ತಿಂಗಳ ಅವಧಿಗೆ ಅವರ ಖಾತೆಯಲ್ಲಿರುವ ರಜೆಯನ್ನು ಮಂಜೂರು ಮಾಡುವುದು. ಒಂದು ವೇಳೆ, ಅವರ ಖಾತೆಯಲ್ಲಿ ರಜೆ ಇಲ್ಲದಿದ್ದಲ್ಲಿ, ಕರಾರಸಾ ಸಂಸ್ಥೆಯ ನೌಕರರ ರಜಾ ನಿಯಮಾವಳಿ 1964 ರ ನಿಯಮ 16 ರನ್ವಯ ಲೆಕ್ಕದಲ್ಲಿಲ್ಲದ (Leave Not Due) ರಜೆಯನ್ನು ಮಂಜೂರು ಮಾಡುವುದು.

..2

145
1/7/20

AM
Imran

4) ಅಲ್ಲದೇ, ಅವರು ಇಚ್ಛಿಸಿದಲ್ಲಿ ಮಗುವಿಗೆ ಒಂದು ವರ್ಷ ತುಂಬುವವರೆಗೆ ಅವರ ಖಾತೆಯಲ್ಲಿರುವ ರಜೆಯನ್ನು ಮಂಜೂರು ಮಾಡುವುದು. ಒಂದು ವೇಳೆ, ಅವರ ಖಾತೆಯಲ್ಲಿ ರಜೆ ಇಲ್ಲದಿದ್ದಲ್ಲಿ ಅವರಿಗೆ ವೇತನ ರಹಿತ ವಿಶೇಷ ರಜೆಯನ್ನು ಮಂಜೂರು ಮಾಡುವುದು. ಸದರಿ ಅವಧಿಯಲ್ಲಿ ಮಹಿಳಾ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ಹಾಜರಾಗುವಂತೆ ಒತ್ತಾಯಿಸತಕ್ಕದ್ದಲ್ಲ.

5) ತರಬೇತಿ ನಿರ್ವಾಹಕಿ/ಚಾಲಕಿ/ಚಾಲಕಿ-ಕಂ-ನಿರ್ವಾಹಕಿಯರು/ತಾಂತ್ರಿಕ ಸಿಬ್ಬಂದಿಗಳು/ ಮಾರ್ಗ ತಪಾಸಣೆ ಕರ್ತವ್ಯ ನಿರ್ವಹಿಸುವ ಗರ್ಭಿಣಿ ಮಹಿಳಾ ನೌಕರರು ಹೆರಿಗೆ ರಜೆಯ ಅವಧಿಯು ಮುಕ್ತಾಯಗೊಂಡ ಮೇಲೆ ಅವರು ಇಚ್ಛಿಸಿದಲ್ಲಿ ಅಂದರೆ ಮಗುವಿಗೆ ಒಂದು ವರ್ಷ ತುಂಬುವವರೆಗೆ ವೇತನ ರಹಿತ ವಿಶೇಷ ರಜೆಯನ್ನು ಮಂಜೂರು ಮಾಡುವುದು ಮತ್ತು ರಜಾ ಅವಧಿಗೆ ಶಿಸ್ತು ಕ್ರಮ ಜರುಗಿಸತಕ್ಕದ್ದಲ್ಲ.

6) ಮುಂದುವರೆದು, ಮೊದಲ 2 ತಿಂಗಳ ಗರ್ಭಧಾರಣೆ ಅವಧಿಯಲ್ಲಿ ನೌಕರಳು ಬಯಸಿದಲ್ಲಿ ಅಥವಾ ವೈದ್ಯರು ಸೂಚಿಸಿದಲ್ಲಿ ಅವಶ್ಯಕತೆಗೆ ಅನುಗುಣವಾಗಿ ರಜೆ ಮಂಜೂರು ಮಾಡುವುದು. ರಜೆ ಇಲ್ಲದೇ ಹೋದಲ್ಲಿ ವೇತನ ರಹಿತ ವಿಶೇಷ ರಜೆಯನ್ನು ಮಂಜೂರು ಮಾಡಿ ಅನುಕೂಲ ಮಾಡಿಕೊಡುವುದು.

ಉಳಿದಂತೆ, ಉಲ್ಲೇಖಿತ ಸುತ್ತೋಲೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸಂಬಂಧಪಟ್ಟವರೆಲ್ಲರೂ ಮೇಲಿನ ತಿದ್ದುಪಡಿಯನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

ಈ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬಂದಿರುತ್ತದೆ.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು

**ಪ್ರತಿ ಮಾಹಿತಿಗಾಗಿ:**

1. ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ರವರಿಗೆ.
3. ನಿರ್ದೇಶಕರು(ಸಿ:ಪ)/ ನಿರ್ದೇಶಕರು(ಭ:ಜಾ), ಕರಾರಸಾ ನಿಗಮ, ರವರಿಗೆ.

**ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ಹಿರಿಯ/ವಿಭಾಗೀಯ ಮುಖ್ಯಸ್ಥರುಗಳು, ಕರಾರಸಾ ನಿಗಮ ರವರುಗಳಿಗೆ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ನೇಮಕ), ಕರಾರಸಾ ನಿಗಮ/ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ.
6. ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ) ರವರಿಗೆ ವರದಿ ಸಲ್ಲಿಸುವುದು.
7. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
9. ಪ್ರಧಾನ ಕಛೇರಿ ಪತ್ರ ಕಡತ.